**ರೆಂಬೆಗಳ ಸವರುವಿಕೆಯಿಂದ ಗೇರು ಮರಗಳ ಪುನಶ್ಚೇತನ:** ಗೇರು ಕಸಿ ಗಿಡಗಳು ನಾಟಿ ಆದ ನಂತರ 35 ರಿಂದ 40 ವರ್ಷದವರೆಗೂ ಆರ್ಥಿಕ ಇಳುವರಿ ಕೊಡುತ್ತವೆ. ರಾಜ್ಯದ ಮೈದಾನ ಪ್ರದೇಶದಲ್ಲಿ ಕಡಿಮೆ ಅಂತರದಲ್ಲಿ ಗೋಡಂಬಿ ತಳಿಗಳನ್ನು ಫಲವತ್ತಾದ ಭೂಮಿಯಲ್ಲಿ ಬೆಳೆದಾಗ ಅವು 20 ರಿಂದ 22 ವರ್ಷದೊಳಗೆ ಕೊಟ್ಟ ಅಂತರವನ್ನೆಲ್ಲಾ ಆವರಿಸಿಕೊಂಡು ಬೆಳೆದು, ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ. ಅಂತಹ ತೋಟಗಳಲ್ಲಿ ಮರಗಳ ಮೂಲ ರೆಂಬೆಗಳನ್ನು ಕಾಂಡದಿಂದ 1.5ಮೀ. ಎತ್ತರಕ್ಕೆ ಕತ್ತರಿಸಿ ಪುನಶ್ಚೇತನ ಗೊಳಿಸಬಹುದು.

**ಹೆಚ್ಚಿನ ಇಳುವರಿಯನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳು :**

**1. ಮರಗಳ ಆಯ್ಕೆ:** ಫಲವತ್ತಾದ ಭೂಮಿಯಲ್ಲಿ ಕಡಿಮೆ ಅಂತರದಲ್ಲಿ ಬೆಳೆದ 20 ವರ್ಷ ಮೇಲ್ಪಟ್ಟ, ಕಡಿಮೆ ಇಳುವರಿ ಕೊಡುವ ಕಸಿ ಮರಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

**2. ರೆಂಬೆಗಳನ್ನು ಕತ್ತರಿಸುವುದು:** ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳಲ್ಲಿ ರೆಂಬೆಗಳನ್ನು 7.5 ಅಡಿ ಎತ್ತರಕ್ಕೆ ತೊಗಟೆ ಸೀಳದಂತೆ ಗರಗಸದ ಸಹಾಯದಿಂದ ಕತ್ತರಿಸಬೇಕು. ಕತ್ತರಿಸಿದ ಭಾಗಕ್ಕೆ, 50 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್‌ನ್ನು ಒಂದು ಲೀಟರ್ ನೀರಿನಲ್ಲಿ ಕರಗಿಸಿ ತಯಾರಿಸಿದ ದ್ರಾವಣವನ್ನು ಲೇಪಿಸಬೇಕು.

**3. ಚಿಗುರು ಬರುವಿಕೆ ಮತ್ತು ಇಳುವರಿ:** ರೆಂಬೆಗಳನ್ನು ಕತ್ತರಿಸಿದ 25–30 ದಿನಗಳಾದ ಮೇಲೆ ಚಿಗುರುಗಳು ಬರಲು ಪ್ರಾರಂಭವಾಗುತ್ತವೆ. ಆ ಚಿಗುರುಗಳನ್ನು ಹಾಗೆಯೇ ಬೆಳೆಯಲು ಬಿಡಬೇಕು ಮತ್ತು ಚಿಗುರುಗಳು ಸುಧಾರಿತ/ಸಂಕರಣ ತಳಿಯದ್ದಾಗಿರುವುದರಿಂದ ಕಸಿ ಕಟ್ಟುವ ಅವಶ್ಯಕತೆ ಬರುವುದಿಲ್ಲ. ಬೆಳೆದ ಚಿಗುರುಗಳು ಜನವರಿ–ಫೆಬ್ರವರಿ ತಿಂಗಳುಗಳಲ್ಲಿ ಹೂ ಬಿಡುವುದರಿಂದ, ಮೊದಲನೆ ವರ್ಷ ಚಿಗುರುಗಳನ್ನು ತೆಗೆಯಬಾರದು. ಎರಡನೇ ವರ್ಷ ದಟ್ಟವಾಗಿರುವ ಮತ್ತು ಅಡ್ಡಾ–ದಿಡ್ಡಿಯಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಿ ಮರಗಳಿಗೆ ಆಕಾರವನ್ನು ಕೊಡಬೇಕು. ಕತ್ತರಿಸಿದ ವರ್ಷವೇ ಮರವೊಂದಕ್ಕೆ 250 ಗ್ರಾಂ. ಇಳುವರಿ ದೊರೆತು, ಮೂರನೇ ವರ್ಷದಲ್ಲಿ 3 ರಿಂದ 4 ಕಿ.ಗ್ರಾಂ. ಬೀಜದ ಇಳುವರಿಯನ್ನು ಪಡೆಯಬಹುದು.

**4. ಪುನಶ್ಚೇತನಗೊಳಿಸಿದ ಮರಗಳಲ್ಲಿನ ಇಳುವರಿ :** ಕಸಿ ಕಟ್ಟಿದ ವರ್ಷವೇ ಇಳುವರಿ ಪ್ರಾರಂಭಗೊಳ್ಳುತ್ತದೆ. ಮರವೊಂದಕ್ಕೆ ಎರಡನೇ ವರ್ಷದಲ್ಲಿ ಸುಮಾರು 2 ಕಿ.ಗ್ರಾಂ, ಮೂರನೇ ಹಾಗೂ ನಾಲ್ಕನೇ ವರ್ಷಗಳಲ್ಲಿ 4–5 ಕಿ.ಗ್ರಾಂ ಇಳುವರಿ ಹೀಗೆ ಸುಮಾರು 6–8 ವರ್ಷಗಳ ಮರಗಳಲ್ಲಿ 8 ರಿಂದ 12 ಕಿ.ಗ್ರಾಂ ಬೀಜದ ಇಳುವರಿ ಸಾಧ್ಯ. ಪುನಶ್ಚೇತನಗೊಳಿಸಿದ ಮರಗಳು ಹಳೆಬೇರಿನಿಂದಾಗಿ ಬಹು ಬೇಗ ಬೆಳವಣಿಗೆ ಹೊಂದಿ, ಹೆಚ್ಚು ಇಳುವರಿಯನ್ನು ಕೊಡುತ್ತವೆ.

**ಇಳುವರಿ:** ಪ್ರತಿ ಗಿಡದಿಂದ 8 ರಿಂದ 10 ಕಿ.ಗ್ರಾಂ (ಪ್ರತಿ ಎಕರೆಗೆ 6 ರಿಂದ 7 ಕ್ವಿಂಟಾಲ್) ಅಧಿಕ ಸಾಂದ್ರತೆಯ ಬೇಸಾಯದಲ್ಲಿ ಪ್ರತಿ ಗಿಡದಿಂದ 3 ರಿಂದ 4 ಕಿ.ಗ್ರಾಂ. ಬೀಜದ ಇಳುವರಿಯನ್ನು ಪಡೆಯಬಹುದು.

**ಗೋಡಂಬಿ ಸಂಸ್ಕರಣೆ :**

**1. ಒಣಗಿಸುವುದು ಹಾಗೂ ತೇವಾಂಶ ಹದಗೊಳಿಸುವುದು:** ಬಿಸಿಲಿನಲ್ಲಿ ಗೇರು ಬೀಜಗಳನ್ನು 2–3 ದಿನಗಳು ಒಣಗಿಸಿ, ಒಣಗಿದ ಬೀಜಗಳಿಗೆ ನೀರು ಚಿಮುಕಿಸಿ ತೇವಾಂಶದ ಮಟ್ಟವನ್ನು ಶೇ. 15 ರಿಂದ 25 ರ ವರೆಗೆ ಏರಿಸಬೇಕು.

**2. ಹುರಿಯುವುದು:** ಕವಚ ಬೇರ್ಪಡಿಸಲು ಅನುಕೂಲವಾಗುವಂತೆ ಗೇರು ಬೀಜವನ್ನು ಹುರಿಯಬೇಕು. ಇದರಲ್ಲಿ ಹಲವು ವಿಧಾನಗಳಿವೆ. ರಂಧ್ರಗಳನ್ನು ಹೊಂದಿರುವ ತಿರುಗುವ ಡ್ರಮ್ಮಿನ ಸಹಾಯದಿಂದ ಗೋಡಂಬಿಯನ್ನು ಬೆಂಕಿಯ ಮೇಲೆ ಹುರಿಯುವುದು ಒಂದು ವಿಧಾನ. ಇನ್ನೊಂದು ವಿಧಾನದಲ್ಲಿ ಕಾಯಿಗಳನ್ನು 155 ರಿಂದ $160^{0}$ ಸೆ. ಉಷ್ಣತಾಪಮಾನಕ್ಕೆ ಕಾಯಿಸಿದ ಎಣ್ಣೆಯಲ್ಲಿ 3 ನಿಮಿಷ ಅದ್ದಿತೆಗೆಯಬೇಕು. ಈ ಕ್ರಿಯೆಯಲ್ಲಿ ಕವಚದಿಂದ ಎಣ್ಣೆ ಬಿಡುಗಡೆಯಾಗುವುದಲ್ಲದೆ ಕಾಯಿಗಳು ಸಮಾನವಾಗಿ ಹುರಿಯಲ್ಪಡುವವು ಮತ್ತು ಬೀಜಗಳು ಕರಕಲಾಗುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ನೀರಿನ ಹವೆಯಿಂದ ಬೀಜಗಳನ್ನು ಹುರಿಯುವುದರಿಂದ ಉತ್ತಮ ಬಣ್ಣದ ಬೀಜಗಳನ್ನು ಪಡೆಯಲು ಸಾಧ್ಯ.

**3. ಕವಚ ಬಿಡಿಸುವುದು :** ನುರಿತ ಕೆಲಸಗಾರರು ಕಾರ್ಖಾನೆಗಳಲ್ಲಿ ಮಾನವ ಚಾಲಿತ ಕತ್ತರಿಸುವ ಯಂತ್ರಗಳ ಮೂಲಕ ತಿರುಳಿಗೆ ಪೆಟ್ಟಾಗದಂತೆ ಕವಚವನ್ನು ಬಿಡಿಸುತ್ತಾರೆ.

**4. ಒಣಗಿಸುವುದು:** ತಿರುಳಿನ ತೇವಾಂಶ ಕಡಿಮೆಗೊಳಿಸಲು 6 ರಿಂದ 12 ಗಂಟೆಗಳ ಕಾಲ ಡ್ರೈಯರ್‌ಗಳಲ್ಲಿ ಒಣಗಿಸಬೇಕು. ಇದರಿಂದ ಅಂಟಿಕೊಂಡಿರುವ ಕಂದು ಬಣ್ಣದ ಹೊದಿಕೆ ಸಡಿಲಗೊಳ್ಳುತ್ತದೆ.

**5. ಹೊದಿಕೆ ತೆಗೆಯುವುದು:** ಬೀಜದ ಹೊದಿಕೆಯನ್ನು ಕೈಯಿಂದ ತಿರುಳುಗಳಿಗೆ ಪೆಟ್ಟಾಗದಂತೆ ತೆಗೆಯಬೇಕು. ಹೊದಿಕೆ ತೆಗೆಯುವಾಗ ತಿರುಳಿನ ಆಕಾರ ಹಾಳಾಗದಂತೆ ಹಾಗೂ ತಿರುಳುಗಳು ಚೂರಾಗದಂತೆ ಜಾಗ್ರತೆ ವಹಿಸಬೇಕು.

**6. ವಿಂಗಡಣೆ (ಗ್ರೇಡಿಂಗ್) :** ಒಂದು ಪೌಂಡಿಗೆ ಎಷ್ಟು ಬೀಜಗಳಿರುತ್ತವೆ ಎನ್ನುವುದರ ಆಧಾರದ ಮೇಲೆ ಗೋಡಂಬಿ ಬೀಜವನ್ನು ವಿಂಗಡಿಸುತ್ತಾರೆ. ಆ ಪ್ರಕಾರ ಪ್ರತಿ ಪೌಂಡಿಗೆ ಸುಮಾರು 180, 210, 240, 280, 320, 400 ಮತ್ತು 450 ಹೋಳಾಗದೆ ಇರುವ ಉಂಡೆ ಬೀಜಗಳನ್ನು ಬಣ್ಣದ ಆಧಾರದ ಮೇಲೆ ಮತ್ತು ಆಕಾರದ ಆಧಾರದ ಮೇಲೆ ವಿವಿಧ ರೀತಿಯಲ್ಲಿ ವಿಂಗಡಿಸಬಹುದು. ಬೀಜಗಳು ಪೂರ್ತಿಯಾಗಿ ಬೆಳವಣಿಗೆಯಾಗಿದ್ದು ದಂತ ಬಿಳಿ ಬಣ್ಣದಿಂದ ಕೂಡಿದ್ದು ಹುಳುಗಳ ಹಾನಿ ಮತ್ತು ಕಪ್ಪು ಚುಕ್ಕಿಗಳಿಂದ ಮುಕ್ತವಾಗಿರಬೇಕು. ಹೋಳಾಗಿರುವ ಮತ್ತು ಚೂರಾಗಿರುವ ಬೀಜಗಳನ್ನು ಪ್ರತ್ಯೇಕವಾಗಿ ಹಲವು ಗುಂಪುಗಳಾಗಿ ವರ್ಗೀಕರಿಸುತ್ತಾರೆ.

**7. ಪ್ಯಾಕಿಂಗ್ :** ವಿಂಗಡಿಸಿದ ಬೀಜಗಳನ್ನು ಟಿನ್ ಡಬ್ಬದಲ್ಲಿ ತುಂಬಬೇಕು. ಡಬ್ಬದ ಒಳ ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ತುಂಬಿ ಮೊಹರು ಮಾಡಬೇಕು. ಒಂದು ಟಿನ್ ಡಬ್ಬದಲ್ಲಿ 25 ಪೌಂಡ್ (11 ಕಿ.ಗ್ರಾಂ) ಬೀಜಗಳನ್ನು ತುಂಬಬಹುದು. ಇತ್ತೀಚಿನ ವರ್ಷಗಳಲ್ಲಿ ವಿವಿಧ ತೂಕದ ಟಿನ್‌ಗಳಲ್ಲಿ ಹಾಗೂ ಪಾಲಿಥೀನ್ ಚೀಲಗಳಲ್ಲಿ ಪ್ಯಾಕಿಂಗ್ ಮಾಡಲಾಗುತ್ತದೆ.

Technical Folder Series No. 06/2020

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ
ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಬೀದರ

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು

# ಗೇರು(ಗೋಡಂಬಿ) ಬೆಳೆಯ ಸುಧಾರಿತ ಬೇಸಾಯ ಕ್ರಮಗಳು



ತಾಂತ್ರಿಕ ಮಾಹಿತಿ :
ಡಾ. ರಶ್ಮಿ ಆರ್.
ಡಾ. ರಮೇಶ ಟಿ. ಜೆ.
ಡಾ. ಚೇತನ್ ಎನ್.
ಡಾ. ಕೇದಾರನಾಥ
ಡಾ. ನವೀನ್ ಕುಮಾರ್ ಬಿ. ಟಿ.
ಡಾ. ಮಲ್ಲಿಕಾರ್ಜುನ ಎಲ್.
ಡಾ. ಶೋಧನ್ ಕೆ.ವಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872

ಮಾರ್ಚ್, 2020

ಮೇ, 2020

ಗೇರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಜಿಲ್ಲೆಯಾದ್ಯಂತ ಸುಮಾರು 34358 ಹೆಕ್ಟೇರು ಪ್ರದೇಶದಲ್ಲಿ ಬೆಳೆಯುತ್ತಿದ್ದು, ಗೋಡಂಬಿ ವಿದೇಶಿ ವಿನಿಮಯಗಳಿಸುತ್ತಿರುವ ಮುಖ್ಯವಾದ ಬೆಳೆಗಳಲ್ಲಿ ಒಂದಾಗಿದೆ.

**ಮಣ್ಣು:** ಈ ಬೆಳೆಯನ್ನು ಎಲ್ಲಾ ವಿಧವಾದ ಮಣ್ಣುಗಳಲ್ಲೂ ಬೆಳೆಯಬಹುದಾದರೂ ನೀರು ಬಸಿದು ಹೋಗುವಂತಹ ಕೆಂಪು ಗೋಡು, ಜಂಬಿಟ್ಟಿಗೆ ಮತ್ತು ಮಧ್ಯಮ ಕಪ್ಪು ಮಣ್ಣುಗಳು ಹೆಚ್ಚು ಸೂಕ್ತ.

**ಹವಾಗುಣ:** ಈ ಬೆಳೆ ವಾತಾವರಣದಲ್ಲಿ ಹೆಚ್ಚು ತೇವಾಂಶ ಮತ್ತು ಉಷ್ಣವಿರುವ ಕಡಲತೀರ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯಬಲ್ಲದು. ಸಮುದ್ರ ಮಟ್ಟದಿಂದ 1000 ಮೀಟರ್‌ಗಳವರೆಗೆ ಎಲ್ಲಾ ಪ್ರದೇಶಗಳಲ್ಲೂ ಉತ್ತಮವಾಗಿ ಬೆಳೆಯಬಹುದು. ಈ ಬೆಳೆಯು ಹೆಚ್ಚು ಉಷ್ಣ ಹವೆಯನ್ನು (25 ಡಿಗ್ರಿ ಸೆಂ. ರಿಂದ 40 ಡಿಗ್ರಿ ಸೆಂ.) ತಡೆಯುವ ಶಕ್ತಿಯನ್ನು ಹೊಂದಿದೆ. ಅಲ್ಲದೆ ಮಣ್ಣಿನಲ್ಲಿ ತೇವಾಂಶ ಕಡಿಮೆ ಇದ್ದರೂ ಸಹ ಹೊಂದಿಕೊಂಡು ಬೆಳೆಯಬಲ್ಲದು. ಈ ಬೆಳೆಯನ್ನು 500 ರಿಂದ 3500 ಮಿ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆಯಬಹುದು.

**ನಾಟಿ ಕಾಲ** : ಜೂನ್–ಆಗಸ್ಟ್

**ಕರಾವಳಿ ಪ್ರದೇಶಕ್ಕೆ ಸೂಕ್ತವಾದ ತಳಿಗಳು**

**ಉಳ್ಳಾಲ – 1 :** ಹೆಚ್ಚು ಇಳುವರಿ (ಗಿಡಕ್ಕೆ 20 ಕಿ.ಗ್ರಾಂ) ಕೊಡುವ ತಳಿಯಾಗಿದ್ದು ಹಣ್ಣುಗಳು ಹಳದಿ ಮಿಶ್ರಿತ ಕೆಂಪು ಬಣ್ಣದಿಂದಿರುತ್ತವೆ, ಬೀಜಗಳು ಮಧ್ಯಮ ಗಾತ್ರದ್ದಾಗಿರುತ್ತವೆ. ನವೆಂಬರ್ ಮಧ್ಯಭಾಗದಿಂದ ಹೂ ಬಿಡಲು ಪ್ರಾರಂಭಿಸಿ ಏಪ್ರಿಲ್–ಮೇ ತಿಂಗಳವರೆಗೂ ಕೊಯ್ಲಿಗೆ ಬರುತ್ತದೆ. ಟೀ ಸೊಳ್ಳೆಯ ಬಾಧೆಯನ್ನು ತಪ್ಪಿಸಿಕೊಳ್ಳುವ ಗುಣ ಹೊಂದಿದೆ.

**ಉಳ್ಳಾಲ – 2 :** ಕಡಿಮೆ ಅವಧಿಯಲ್ಲಿ ಕೊಯ್ಲು ಮುಕ್ತಾಯವಾಗುವುದು. ಈ ತಳಿಯು ಸರಾಸರಿ 18.5 ಕಿ.ಗ್ರಾಂ ಇಳುವರಿ ಕೊಡುತ್ತದೆ. ಹಣ್ಣುಗಳು ಕೆಂಪು, ಬೀಜಗಳು ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿದ್ದು ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಕೊಯ್ಲಿಗೆ ಸಿದ್ಧವಾಗಿರುತ್ತದೆ.

**ಉಳ್ಳಾಲ – 3 :** ಬೇಗನೆ ಕೊಯ್ಲಿಗೆ ಬರುವ ಸರಾಸರಿ 14.5 ಕಿ.ಗ್ರಾಂ ಇಳುವರಿ ಕೊಡುವ ತಳಿ. ಬೀಜಗಳು ಉತ್ತಮ ಗಾತ್ರ ಹೊಂದಿದ್ದು, ಜನವರಿ–ಮಾರ್ಚ್ ತಿಂಗಳಲ್ಲಿ ಕೊಯ್ಲು ಮುಗಿಯುತ್ತದೆ.

**ಉಳ್ಳಾಲ – 4 :** ಈ ತಳಿಯ ಬೀಜಗಳು ಸಾಧಾರಣ ಉತ್ತಮ ಗಾತ್ರದ್ದಾಗಿರುತ್ತವೆ. ಹಣ್ಣುಗಳ ಬಣ್ಣ ಹಳದಿ. ಇದು ಸರಾಸರಿ 9.5 ಕಿ.ಗ್ರಾಂ ಇಳುವರಿ ಕೊಡುತ್ತದೆ. ಕೊಯ್ಲು ಮಾರ್ಚ್ ಒಳಗೆ ಮುಗಿಯುತ್ತದೆ.

**ಯು.ಎನ್.– 50 :** ಕೆಂಪು ಮಿಶ್ರಿತ ಹಳದಿ ಹಣ್ಣುಗಳನ್ನು ಹೊಂದಿರುವ ಈ ತಳಿಯ ಬೀಜಗಳು ದೊಡ್ಡ ಗಾತ್ರ (9 ಗ್ರಾಂ)ವಾಗಿರುತ್ತವೆ. ಮರವೊಂದಕ್ಕೆ ಸುಮಾರು 10.5 ಕಿ.ಗ್ರಾಂ.ರಷ್ಟು ಇಳುವರಿ ಕೊಡುತ್ತದೆ.

**ಭಾಸ್ಕರ–:** ಈ ತಳಿಯನ್ನು ಪುತ್ತೂರಿನ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರದವರು ಕರಾವಳಿ ಪ್ರದೇಶಕ್ಕೆ ಸೂಕ್ತವೆಂದು ಬಿಡುಗಡೆ ಮಾಡಿರುತ್ತಾರೆ. ಒಂದು ಮರ ಸರಾಸರಿ ವಾರ್ಷಿಕ 10 ಕಿ.ಗ್ರಾಂ ಇಳುವರಿ ಕೊಡುತ್ತದೆ. 'ಟೀ' ಸೊಳ್ಳೆಗಳ ಬಾಧೆಯನ್ನು ತಪ್ಪಿಸಿಕೊಳ್ಳುವಂತಹ ಗುಣ ಹೊಂದಿದೆ.

**ಬೇಸಾಯ ಸಾಮಗ್ರಿಗಳು**

**ನಾಟಿ ಅಂತರ** : ಸಾಲಿನಿಂದ ಸಾಲಿಗೆ ಮತ್ತು ಗಿಡದಿಂದ ಗಿಡಕ್ಕೆ 26 ಅಡಿ ಅಂತರವಿರಬೇಕು. ಒಂದು ಎಕರೆಗೆ 63 ಗಿಡಗಳನ್ನು ನಾಟಿ ಮಾಡಬಹುದು.

**ಕೊಟ್ಟಿಗೆ ಗೊಬ್ಬರ:** ಪ್ರತಿ ಗಿಡಕ್ಕೆ ಪ್ರತಿ ವರ್ಷಕ್ಕೆ 25 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರ ಕೊಡಬೇಕು.

**ರಾಸಾಯನಿಕ ಗೊಬ್ಬರಗಳು : ಪ್ರತಿ ಗಿಡಕ್ಕೆ (ಗ್ರಾಂ)**

| ವಯಸ್ಸು | ಸಾರಜನಕ | ರಂಜಕ | ಪೊಟ್ಯಾಷ್ |
|---|---|---|---|
| ವರ್ಷ 1 | 60 | 60 | 60 |
| ವರ್ಷ 2 | 125 | 125 | 125 |
| ವರ್ಷ 3 | 250 | 125 | 125 |
| ವರ್ಷ 4 | 500 | 125 | 125 |
| 5 ವರ್ಷ ಮತ್ತು ನಂತರ | 500 | 250 | 250 |

**ಪೋಷಕಾಂಶಗಳ ನಿರ್ವಹಣೆ** : 4 ವರ್ಷದ ಹಾಗೂ ನಂತರದ ಗಿಡಗಳಿಗೆ ಶಿಫಾರಸ್ಸಿನ ಶೇ. 50 ರಷ್ಟು ರಾಸಾಯನಿಕ ಗೊಬ್ಬರಗಳ ಜೊತೆಗೆ 40 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರವನ್ನು ಕೊಡುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದು.

**ಸಸ್ಯಾಭಿವೃದ್ಧಿ**

**ಮೃದು ಕಾಂಡ ಕಸಿ ಅಥವಾ ಹಸಿರು ಕಾಂಡದ ಕಸಿ :** ಪ್ಲಾಸ್ಟಿಕ್ ಚೀಲಗಳಲ್ಲಿ ಬೆಳೆಸಿದ 3 ರಿಂದ 4 ತಿಂಗಳ ವಯಸ್ಸಿನ ಬೇರು ಸಸಿಯ (ರೂಟ್‌ಸ್ಟಾಕ್) ಮೇಲೆ ಬೆಣೆ (ವೆಡ್ಜ್) ಕಸಿ ಕಟ್ಟಬೇಕು. ಇದಕ್ಕೆ ಜೂನ್ ನಿಂದ ಆಗಸ್ಟ್ ತಿಂಗಳು ಸೂಕ್ತ ಕಾಲ. 6 ರಿಂದ 12 ತಿಂಗಳುಗಳ ವಯಸ್ಸಿನ ಕಸಿ ಗಿಡಗಳನ್ನು ನಾಟಿಗೆ ಬಳಸಬೇಕು.

**ಭೂಮಿಯನ್ನು ಸಿದ್ಧಪಡಿಸಿ ಸಸಿಗಳನ್ನು ನಾಟಿ ಮಾಡುವುದು:** ಹದಗೊಳಿಸಿದ ಭೂಮಿಯಲ್ಲಿ 26 x 26 ಅಡಿ ಅಂತರದಲ್ಲಿ 2.5 ಘನ ಅಡಿ ಅಳತೆಯ ಗುಣಿಗಳನ್ನು ತೆಗೆಯಬೇಕು. ಈ ಗುಣಿಗಳನ್ನು ಮೇಲ್ಮಣ್ಣು ಮತ್ತು 25 ಕಿ.ಗ್ರಾಂ ಸಾವಯವ ಗೊಬ್ಬರದ ಮಿಶ್ರಣದಿಂದ ತುಂಬಬೇಕು. ಮುಂಗಾರಿನ ಸಮಯದಲ್ಲಿ ಗುಣಿಯ ಮಧ್ಯ ಭಾಗದಲ್ಲಿ ಕಸಿಗಿಡಗಳನ್ನು ನಾಟಿ ಮಾಡಬೇಕು. ಕರಾವಳಿಯಲ್ಲಿ ಒಂದೇ ಕಂತಿನಲ್ಲಿ (ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ) ಕೊಡುವುದು ಸೂಕ್ತ.

**ಅಧಿಕ ಸಾಂದ್ರತೆ ನಾಟಿ** : ಈ ಪದ್ಧತಿಯಲ್ಲಿ ಗೋಡಂಬಿ ಸಸಿಗಳನ್ನು ನಾಟಿ ಮಾಡುವುದರಿಂದ ಸಾಮಾನ್ಯ ಪದ್ಧತಿಗಿಂತ 3 ರಿಂದ 4 ಪಟ್ಟು ಹೆಚ್ಚು ಇಳುವರಿಯನ್ನು ಪಡೆಯಬಹುದು. ಈ ಪದ್ಧತಿಯಲ್ಲಿ ಎಕರೆಗೆ 440 ರಿಂದ 640 ಗಿಡಗಳನ್ನು ನಾಟಿ ಮಾಡಬಹುದು. ಆದರೆ ಸವರುವಿಕೆಯನ್ನು ಮಾಡುವುದು ಅತ್ಯವಶ್ಯಕ. ಈ ಪದ್ಧತಿಗೆ ಬೇಗನೆ ಇಳುವರಿಯನ್ನು ಕೊಡುವ ಉಳ್ಳಾಲ–1, ಉಳ್ಳಾಲ–3 ಮತ್ತು ಹೆಚ್–130 ತಳಿಗಳನ್ನು ಬಳಸುವುದು ಸೂಕ್ತ. ಈ ಸವರುವಿಕೆ ಪದ್ಧತಿಗೆ ಉತ್ತಮ ಪ್ರತಿಕ್ರಿಯೆ ನೀಡುವ ಹೆಚ್–130 ತಳಿಯು ಹೆಚ್ಚು ಸೂಕ್ತವಾಗಿದೆ.

**ನಾಟಿಯ ನಂತರದ ನಿರ್ವಹಣೆ** : ನಾಟಿ ಮಾಡಿದ ನಂತರದ ಪ್ರಾರಂಭಿಕ ವರ್ಷಗಳಲ್ಲಿ ಗಿಡಗಳ ಕಾಂಡ ನೆಟ್ಟಗೆ ಬೆಳೆಯಲು ತಳಭಾಗದ ರೆಂಬೆಗಳನ್ನು ಸವರಿ ತೆಗೆದು ಸ್ಥಳೀಯ ಹವಾಗುಣ ಮತ್ತು ಭೂಗುಣಗಳಿಗೆ ಸೂಕ್ತವಿರುವ ತರಕಾರಿ, ದ್ವಿದಳ ಧಾನ್ಯ ಮತ್ತು ಹುಲ್ಲಿನ ಬೆಳೆಗಳನ್ನು ಅಂತರ ಬೆಳೆಗಳಾಗಿ ಬೆಳೆಯಬಹುದು. ಒಣಗಿದ, ರೋಗ–ಕೀಟಗಳ ಬಾಧೆಗೆ ತುತ್ತಾದ ಹಾಗೂ ಅಡ್ಡಾ–ದಿಡ್ಡಿಯಾಗಿ ಬೆಳೆದ ಕೊಂಬೆ–ರೆಂಬೆಗಳನ್ನು 2 ರಿಂದ 3 ವರ್ಷಕ್ಕೊಮ್ಮೆ ಕತ್ತರಿಸಿ ತೆಗೆದು ಗಾಳಿ–ಬೆಳಕು ಬೀಳುವಂತೆ ಮಾಡುವುದರಿಂದ ಇಳುವರಿಯನ್ನು ಹೆಚ್ಚಿಸಬಹುದಾಗಿದೆ. ಕಳೆಗಳನ್ನು ನಿಯಂತ್ರಿಸಿ, ನೀರಾವರಿ ಸೌಲಭ್ಯವಿದ್ದಲ್ಲಿ ತೋಟಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ಮರಗಳಲ್ಲಿ ಹೂ ಬಂದ ನಂತರ, ಜನವರಿ ತಿಂಗಳಿಂದ ಮಾರ್ಚ್ ತಿಂಗಳವರೆಗೆ 15 ದಿನಗಳಿಗೊಮ್ಮೆ 45 ರಿಂದ 50 ಲೀಟರ್ ನೀರನ್ನು ಪ್ರತಿ ಗಿಡಕ್ಕೆ (6 ಸಲ) ಕೊಡುವುದು ಸೂಕ್ತ.

**ಕಡಿಮೆ ಇಳುವರಿ ಕೊಡುವ ಗೇರು ಮರಗಳ ಪುನಶ್ಚೇತನ ಅಥವಾ ಪರಿವರ್ತನೆ:** ಬೀಜದಿಂದ ಬೆಳೆಸಿದ ಮರಗಳಲ್ಲಿ ಇಳುವರಿ ತೀರಾ ಕಡಿಮೆ. ಇಂತಹ ಮರಗಳನ್ನು ಸೂಕ್ತ ಎತ್ತರದಲ್ಲಿ ಕಡಿದು ಅಧಿಕ ಇಳುವರಿ ಹಾಗೂ ಗುಣಮಟ್ಟದ ಬೀಜ ನೀಡುವ ತಳಿಗಳಿಂದ ಕಸಿಕಟ್ಟಿ ಪುನಶ್ಚೇತನ ಮಾಡಲು ಸಾಧ್ಯ.

**ಪುನಶ್ಚೇತನಗೊಳಿಸಲು ಅನುಸರಿಸಬೇಕಾದ ಕ್ರಮಗಳು :**

**ಮರಗಳ ಆಯ್ಕೆ:** ಕೆಳದರ್ಜೆಯ ಹಾಗೂ ಅತಿ ಕಡಿಮೆ ಇಳುವರಿ ಕೊಡುವ 5 ರಿಂದ 15 ವರ್ಷ ವಯಸ್ಸಿನ ಮರಗಳನ್ನು ಪುನಶ್ಚೇತನಗೊಳಿಸಬಹುದು. ಮರಗಳು ಕಾಂಡ ಹಾಗೂ ಬೇರು ಕೊರೆಯುವ ಹುಳುವಿನ ಬಾಧೆಗೆ ತುತ್ತಾಗಿರಬಾರದು.

**ಮರ ಕತ್ತರಿಸುವುದು:** ಡಿಸೆಂಬರ್–ಫೆಬ್ರವರಿ ಅವಧಿಯಲ್ಲಿ ಮರಗಳನ್ನು ಕತ್ತರಿಸಬೇಕು. ನೆಲದಿಂದ 2 ಅಡಿ ಎತ್ತರಕ್ಕೆ ಮರದ ಬೊಡ್ಡೆ ಸೀಳದಂತೆ ಗರಗಸದ ಸಹಾಯದಿಂದ ಅಡ್ಡಕ್ಕೆ ಕತ್ತರಿಸಬೇಕು. ಕತ್ತರಿಸಿದ ಮೇಲೆ 50 ಗ್ರಾಂ. ಕಾರ್ಬಾರಿಲ್ ಮತ್ತು 50 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್‌ಗಳನ್ನು 1 ಲೀಟರ್ ನೀರಿನಲ್ಲಿ ಕರಗಿಸಿ, ಕತ್ತರಿಸಿದ ಭಾಗ ಹಾಗೂ ಬೊಡ್ಡೆಗೆ ಲೇಪಿಸಬೇಕು. ಒಣಹುಲ್ಲಿನ ಅಥವಾ ಕತ್ತರಿಸಿದ ಗೇರು ಟೊಂಗೆಗಳ ಸಹಾಯದಿಂದ ಕತ್ತರಿಸಿದ ಭಾಗವನ್ನು ಮುಚ್ಚಬೇಕು.

**ಚಿಗುರು ಬರುವ ಹಾಗೂ ಕಸಿಕಟ್ಟುವ ಸಮಯ** : ಕತ್ತರಿಸಿದ ಬೊಡ್ಡೆಗಳಿಂದ 30 ರಿಂದ 40 ದಿನಗಳಲ್ಲಿ ಚಿಗುರುಗಳು ಬರಲು ಪ್ರಾರಂಭಿಸುತ್ತವೆ. ಬೆಳೆಯುತ್ತಿರುವ 10 ರಿಂದ 12 ಚಿಗುರುಗಳನ್ನು ಮಾತ್ರ ಉಳಿಸಿಕೊಂಡು ಉಳಿದವುಗಳನ್ನು ಕತ್ತರಿಸಿ ತೆಗೆಯಬೇಕು. ಹೀಗೆ ಉಳಿಸಿಕೊಂಡ ಚಿಗುರುಗಳು ಸುಮಾರು 1 ರಿಂದ 1.5 ಅಡಿ ಉದ್ದಕ್ಕೂ ಬೆಳೆದ ಕೂಡಲೇ, ಉತ್ತಮ ತಳಿಯ ಕಸಿಕಡ್ಡಿಗಳನ್ನು ತಂದು ಕಸಿಮಾಡಿ ಕಸಿಕಟ್ಟಿದ ಕೂಡಲೇ ಕಾಗದ ಅಥವಾ ಪಾಲಿಥೀನ್ ಚೀಲದಿಂದ ಮುಚ್ಚಿ ನೆರಳನ್ನು ಕೊಡಬೇಕು. ಸುಮಾರು 8 ರಿಂದ 12 ದಿನಗಳಲ್ಲಿ ಕಸಿಕಡ್ಡಿಗಳು ಚಿಗುರಲು ಪ್ರಾರಂಭಿಸುತ್ತವೆ. ಯಶಸ್ವಿಯಾದ ಕಸಿಗಳಲ್ಲಿ ಆರೋಗ್ಯವಾಗಿ ಬೆಳೆಯುತ್ತಿರುವ 4 ರಿಂದ 5 ರಷ್ಟನ್ನು ಮಾತ್ರ ಬೆಳೆಯಲು ಬಿಟ್ಟು ಉಳಿದವುಗಳನ್ನು ಕತ್ತರಿಸಬೇಕು ಮೇ–ಜೂನ್ ತಿಂಗಳುಗಳು ಕಸಿ ಕಟ್ಟಲು ಸೂಕ್ತ ಕಾಲ.